# ಅತೃಪ್ತರಿಗೆ ಸುಪ್ರೀಂ ಮತ್ತೊಂದು ಚಾನ್ಸ್

## ರಾಜೀನಾಮೆ ಸಲ್ಲಿಸಲು ಅವಕಾಶ | ಕಾಲಾವಕಾಶ ಕೋರಿದ ಸ್ಪೀಕರ್ ಮನವಿ ತಿರಸ್ಕಾರ

## ಅತೃಪ್ತ ಶಾಸಕರು, ರಮೇಶ್ ಕುಮಾರ್ ಅರ್ಜಿ ಇಂದು ನ್ಯಾಯಾಲಯದಲ್ಲಿ ವಿಚಾರಣೆ

• **ಕನ್ನಡಪ್ರಭ ವಾರ್ತೆ** ನವದೆಹಲಿ 12/7/19

ಸ್ಪೀಕರ್ ವಿರುದ್ಧ ಪಕ್ಷಪಾತದ ಆರೋಪ ಮಾಡಿ ನ್ಯಾಯಾಲಯದ ಕದತಟ್ಟಿದ್ದ ಕಾಂಗ್ರೆಸ್-ಜೆಡಿಎಸ್‌ನ ಹತ್ತು ಅತೃಪ್ತ ಶಾಸಕರ ಅರ್ಜಿ ವಿಚಾರಣೆ ನಡೆಸಿದ 'ಸುಪ್ರೀಂ ಕೋರ್ಟ್ ಗುರುವಾರ ಸಂಜೆ 6 ಗಂಟೆಯೊಳಗೆ ಮತ್ತೊಮ್ಮೆ ರಾಜೀನಾಮೆ ಸಲ್ಲಿಸಲು ಶಾಸಕರಿಗೆ ಅವಕಾಶ ಮಾಡಿಕೊಟ್ಟಿತು. ಜತೆಗೆ, ಈ ರಾಜೀನಾಮೆಗಳ ಕುರಿತು ಕೈಗೊಂಡ ನಿರ್ಧಾರದ ಕುರಿತು ಶುಕ್ರವಾರದ ವಿಚಾರಣೆ ವೇಳೆ ನ್ಯಾಯಾಲಯದ ಮುಂದೆ ತಿಳಿಸುವಂತೆ ಸ್ಪೀಕರ್‌ಗೆ ಸೂಚಿಸಿದೆ. ಏತನ್ಮಧ್ಯೆ, ರಾಜೀನಾಮೆಗೆ ಸಂಬಂಧಿಸಿ ಇನ್ನಷ್ಟು ಕಾಲಾವಕಾಶ ಬೇಕೆಂದು ಕೋರಿ ಸ್ಪೀಕರ್ ಸಲ್ಲಿಸಿದ್ದ ತುರ್ತು ಮನವಿಯನ್ನು ತಿರಸ್ಕರಿಸಿರುವ ಕೋರ್ಟ್, ಅತೃಪ್ತರು ಮತ್ತು ಸ್ಪೀಕರ್ ಸಲ್ಲಿಸಿರುವ ಅರ್ಜಿಯನ್ನು ಶುಕ್ರವಾರ ಜತೆಯಾಗಿ ವಿಚಾರಣೆ ನಡೆಸುವುದಾಗಿ ತಿಳಿಸಿದೆ.



ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ ಮುಂಬೈನ ಹೋಟೆಲ್ ಸೇರಿಕೊಂಡಿದ್ದ ರಮೇಶ್ ಜಾರಕಿಹೊಳಿ, ಬಿ.ಸಿ.ಪಾಟೀಲ ಸೇರಿ 10 ಶಾಸಕರು ಸಲ್ಲಿಸಿದ್ದ ರಿಟ್ ಅರ್ಜಿಗೆ ಸಂಬಂಧಿಸಿ ಗುರುವಾರ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ರಂಜನ್ ಗೊಗೋಯ್, ನ್ಯಾ.ದೀಪಕ್ ಗುಪ್ತಾ ಮತ್ತು ನ್ಯಾ.ಅನಿರುದ್ಧ ಬೋಸ್ ಅವರಿದ್ದ ತ್ರಿಸದಸ್ಯ ನ್ಯಾಯಪೀಠ ಅತೃಪ್ತ ಶಾಸಕರಿಗೆ ಮತ್ತೊಮ್ಮೆ ರಾಜೀನಾಮೆ ಸಲ್ಲಿಸುವ ಅವಕಾಶ ನೀಡಿತು. ಜತೆಗೆ, ಮುಂದಿನ ವಿಚಾರಣೆ ವೇಳೆ ಸ್ಪೀಕರ್ ಈ ರಾಜೀನಾಮೆಗಳ ಕುರಿತು ತಮ್ಮ ನಿರ್ಧಾರವನ್ನು ಪೀಠದ ಮುಂದೆ ತಿಳಿಸಬೇಕು ಎಂದು ಸೂಚಿಸಿತು. ಜತೆಗೆ, ಶಾಸಕರ ಕೋರಿಕೆಯಂತೆ ಮುಂಬೈನಿಂದ ಆಗಮಿಸುವ ಅತೃಪ್ತ ಶಾಸಕರಿಗೆ ಬೆಂಗಳೂರು ವಿಮಾನ ನಿಲ್ದಾಣದಿಂದ ವಿಧಾನಸೌಧದ ವರೆಗೆ ಅಗತ್ಯ ಭದ್ರತೆ ಕಲ್ಪಿಸುವಂತೆ ರಾಜ್ಯದ ಡಿಜಿಪಿಗೆ ನಿರ್ದೇಶನ ನೀಡಿತು.

**ಸ್ಪೀಕರ್ ತುರ್ತು ಅರ್ಜಿ:** ಈ ಆದೇಶ ಹೊರಬಿದ್ದ ಕೆಲವೇ ಗಂಟೆಗಳಲ್ಲಿ ಸ್ಪೀಕರ್ ರಮೇಶ್ ಕುಮಾರ್ ಅರ್ಜಿ ಸಲ್ಲಿಸಿ, ಸುಪ್ರೀಂ ಕೋರ್ಟ್ ತನ್ನ ಆದೇಶವನ್ನು ಹಿಂತೆಗೆದುಕೊಳ್ಳುವಂತೆ ಕೋರಿದರು. ಈ ಅರ್ಜಿಗೆ ಸಂಬಂಧಿಸಿ ವಿಚಾರಣೆ ನಡೆಸಿದ ಪೀಠವು, ಅತೃಪ್ತ ಶಾಸಕರಿಗೆ ಸಂಬಂಧಿಸಿದ ಆದೇಶವನ್ನು ಬೆಳಗ್ಗೆಯೇ ನೀಡಿಯಾಗಿದೆ. ಈ ಹಿನ್ನೆಲೆಯಲ್ಲಿ ಸ್ಪೀಕರ್ ಅರ್ಜಿಯನ್ನು ಶುಕ್ರವಾರ ಅತೃಪ್ತರ ಶಾಸಕರ ಅರ್ಜಿ ಜೊತೆಗೆ ವಿಚಾರಣೆ ನಡೆಸುವುದಾಗಿ ತಿಳಿಸಿತು.

### ಶಾಸಕರ ವಾದವೇನು?

- ಸಂವಿಧಾನದ 190ನೇ ವಿಧಿಯಡಿ ನಾವು ರಾಜೀನಾಮೆಗೆ ಯಾವುದೇ ಕಾರಣ ನೀಡಬೇಕಿಲ್ಲ
- ರಾಜೀನಾಮೆ ಅಂಗೀಕಾರ ವಿಚಾರದಲ್ಲಿ ಸ್ಪೀಕರ್ ತಮ್ಮ ಕರ್ತವ್ಯವನ್ನು ಸರಿಯಾಗಿ ನಿಭಾಯಿಸುತ್ತಿಲ್ಲ
- ಜು.6ಕ್ಕೆ ತಂಡವಾಗಿ ಹೋಗಿ ರಾಜೀನಾಮೆ ಸಲ್ಲಿಸಿದ್ದೇವೆ. ಆದರೆ ಆಗ ಸ್ಪೀಕರ್ ಹಿಂಬಾಗಿಲಿನಿಂದ ಕಚೇರಿ ತೊರೆದರು.
- ಶುಕ್ರವಾರ ಅಧಿವೇಶನದ ಮೊದಲ ದಿನ. ಆದರೂ ಸ್ಪೀಕರ್ ನಮ್ಮ ರಾಜೀನಾಮೆ ಬಗ್ಗೆ ನಿರ್ಧಾರ ಪ್ರಕಟಿಸಿಲ್ಲ
- ರಾಜೀನಾಮೆ ನೀಡಿದ ಬಳಿಕ ಶಾಸಕರು ಅದನ್ನು ಹಿಂತೆಗೆದುಕೊಂಡ ಅನೇಕ ನಿದರ್ಶನಗಳಿವೆ. ಆದರೆ ಈ ಪ್ರಕರಣದಲ್ಲಿ ಹಾಗೆ ಆಗಿಲ್ಲ, ಇಲ್ಲಿರುವುದು ಪಕ್ಷಾಂತರವಲ್ಲ, ಕೇವಲ ರಾಜೀನಾಮೆ.

### ಸ್ಪೀಕರ್ ಪರ ಅರ್ಜಿಯಲ್ಲೇನಿದೆ?

- ಸಂವಿಧಾನದ 190 ವಿಧಿಯಡಿಯ ಪ್ರಕರಣಗಳಿಗೆ ಸಂಬಂಧಿಸಿ ನ್ಯಾಯಾಲಯವು ಸ್ಪೀಕರ್‌ಗೆ ಯಾವುದೇ ನಿರ್ದೇಶನ ನೀಡುವಂತಿಲ್ಲ.
- ಪ್ರತಿವಾದಿಯನ್ನಾಗಿಸದೇ ನೀಡಿರುವ ಆದೇಶವನ್ನು ನ್ಯಾಯಾಲಯ ಹಿಂತೆಗೆದುಕೊಳ್ಳಬೇಕು. ಈ ಆದೇಶವನ್ನು ಸಂವಿಧಾನದ ವಿಧಿ- ವಿಧಾನಗಳನ್ನು ಗಮನಿಸದೇ ದೂರುದಾರರು ಮಾಡಿಕೊಂಡಿರುವ ಮನವಿ ಮೇಲೆ ನೀಡಲಾಗಿದೆ.
- ಸಂವಿಧಾನದ 190 (1) (ಬಿ)ಯು ರಾಜೀನಾಮೆಯು ಸ್ವ ಇಚ್ಛೆಯಿಂದ ಮತ್ತು ನೈಜವಾಗಿ ನೀಡಿದ್ದೇ ಎಂಬುದರ ಬಗ್ಗೆ ತನಿಖೆ ನಡೆಸುವ ಅಧಿಕಾರವನ್ನು ಸ್ಪೀಕರ್‌ಗೆ ನೀಡುತ್ತದೆ.
- ತನಿಖಾ ಪ್ರಕ್ರಿಯೆ ಸ್ಪೀಕರ್‌ಗೆ ತೃಪ್ತಿ ತಂದ ಬಳಿಕ ನಿರ್ಧಾರಕ್ಕೆ ಬರುವ ಅವಕಾಶ ಸ್ಪೀಕರ್‌ಗಿದೆ.
- ಸಂವಿಧಾನದ 33ನೇ ತಿದ್ದುಪಡಿ ಪ್ರಕಾರ ರಾಜೀನಾಮೆಯ ನೈಜತೆ ಮತ್ತು ಸ್ವ ಇಚ್ಛೆ ಬಗ್ಗೆ ಸ್ಪೀಕರ್‌ಗೆ ಮನವರಿಕೆ ಆಗಬೇಕು
- ಶಾಸಕರ ಮೇಲಿನ ಅನರ್ಹತೆ ಬಗ್ಗೆ 10ನೇ ಪರಿಚ್ಛೇದದಡಿ ಅನರ್ಹತೆಯ ದೂರು ಫೆಬ್ರವರಿ 11, 2019ರಂದು ದಾಖಲಾಗಿದ್ದು, ಈ ದೂರುಗಳ ವಾದ ಮಂಡನೆ ಹಂತದಲ್ಲಿದೆ. ಈ ಅಂಶವನ್ನು ಶಾಸಕರ ದೂರಿನಲ್ಲಿ ಮುಚ್ಚಿಡಲಾಗಿದೆ.